**ದಿನಾಂಕಃ 18.10.2025  ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು  – ಪ್ರತಿವಾದಿ ಪರ ವಕೀಲರಿಂದ**

ನಿಪಿ–1 ರ ಸ್ಟಾಂಪ್ ಪೇಪರನ್ನು ನಾನೇ ತಂದಿರುತ್ತೇನೆ. ಸದರಿ ಪೇಪರನ್ನು ತೆಗೆದುಕೊಳ್ಳುವ ಸಮಯದಲ್ಲಿ ಕ್ರಯದ ಬಗ್ಗೆ ಮಾತುಕತೆಯಾಗಿತ್ತು. ನಿಪಿ–1ನ್ನು ಹೊರತು ಪಡಿಸಿ ಬೇರೆ ಅಗ್ರಿಮೆಂಟ್ ಇರುವುದಿಲ್ಲ. ನಿಪಿ–1 ರಲ್ಲಿರುವ ಷರತ್ತುಗಳನ್ನು ನಾನು ಓದಿದ್ದೇನೆ. ನಿಪಿ–1ನ್ನು ವಕೀಲರು ಮಾದಪ್ಪರವರು ಬರೆದಿರುತ್ತಾರೆ. ಪ್ರಸಾದ್ ಜೆರಾಕ್ಸ್ ಅಂಗಡಿಯಲ್ಲಿ ಟೈಪಿಂಗ್ ಮಾಡಿಸಿರುತ್ತೇನೆ. ಟೈಪಿಂಗ್ ಮಾಡುವ ಪೂರ್ವದಲ್ಲಿ ಡ್ರಾಫ್ಟ್ ತೆಗೆದು ನಮಗೆ ಓದಿ ಹೇಳಿರುತ್ತಾರೆ. ಅಗ್ರಿಮೆಂಟ್ ಆಗುವ ದಿನ ದಾವಾ ಸ್ವತ್ತಿನ ಪಹಣಿ 1ನೇ ಪ್ರತಿವಾದಿಯ ಹೆಸರಿನಲ್ಲಿತ್ತು. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. 2017–18 ರಲ್ಲಿ ನಿಪಿ–3 ರಂತೆ ಆರ್ ಟಿ ಸಿ 1ನೇ ಪ್ರತಿವಾದಿಯ ಹೆಸರಿನಲ್ಲಿತ್ತು ಎಂದರೆ ಸರಿ. ಸ್ಕೆಚ್ ಇಲ್ಲದೆ ಆರ್ ಟಿ ಸಿ ಆಧಾರದ ಮೇಲೆ ಕ್ರಯ ನೋಂದಣಿಯಾಗುತ್ತದೆ ಎಂದರೆ ಸರಿಯಲ್ಲ.  ಕ್ರಯ ನೋಂದಣಿ ಮಾಡಬೇಕಾದರೆ ಹಿಂದಿನ ಕ್ರಯಪತ್ರ, ಆರ್ ಟಿ ಸಿ, ಇಸಿ, ಎಂ ಆರ್, ಸ್ಕೆಚ್ ಬೇಕಾಗುತ್ತದೆ. ನಿಪಿ–1 ತಯಾರು ಮಾಡುವ ಸಮಯದಲ್ಲಿ ಆರ್ ಟಿ ಸಿ ಮತ್ತು ಕ್ರಯ ಪತ್ರವನ್ನು ಕೊಟ್ಟಿದ್ದಾರೆ. ಅಗ್ರಿಮೆಂಟ್ ಆಗುವ ದಿನ ನೋಂದಣಿಗೆ ಬೇಕಾಗುವ ಎಲ್ಲಾ ದಾಖಲಾತಿಗಳು ಪ್ರತಿವಾದಿಯ ಬಳಿ ಇತ್ತು ಎಂದರೆ ಸರಿಯಲ್ಲ. ನನ್ನ ಪ್ರಕಾರ ಪ್ರತಿವಾದಿಯ ಬಳಿ ಇಸಿ, ನಕ್ಷೆ, ಎಂ ಆರ್ ದಾಖಲೆಗಳು ಇರಲಿಲ್ಲ. ಸದರಿ ದಾಖಲೆಗಳನ್ನು ನೀಡಿದ ನಂತರ ನೋಂದಣಿ ಮಾಡಿಕೊಳ್ಳುತ್ತೇವೆ ಎಂದು ನಿಪಿ–1 ರಲ್ಲಿ ಬರೆದಿಲ್ಲ. ಈ ಅಗ್ರಿಮೆಂಟ್ 6 ತಿಂಗಳ ಒಳಗೆ ಮಾಡಿದ್ದಾರೆ ಎಂದರೆ ಸರಿ.  ಸೆಕ್ಷನ್ 109 ರಲ್ಲಿ ಪರ್ಮಿಷನ್ ತೆಗೆದುಕೊಳ್ಳಬೇಕಾದ ಕಾರಣ 6 ತಿಂಗಳ ಅವಧಿ ನಿಗಧಿ ಮಾಡಿದ್ದೆವು. ನಾವು ಕಂಪನಿಯವರು ಸರ್ಕಾರಕ್ಕೆ ಅರ್ಜಿ ಹಾಕಿ ಸೆಕ್ಷನ್ 109 ರ ಕೆಳಗಡೆ ಪರ್ಮಿಷನ್ ತೆಗೆದುಕೊಳ್ಳಬೇಕು ಎಂದರೆ ಸರಿ. ಆ ಬಗ್ಗೆ ಮಾಲೀಕರಿಂದ ಒಪ್ಪಿಗೆ ಪತ್ರ ಬೇಕು ಎಂದರೆ ಸರಿ. ನಿಪಿ–1ನ್ನು ಮಾಡುವ ಸಮಯದಲ್ಲಿ ಆ ರೀತಿ ಒಪ್ಪಿಗೆ ಪತ್ರ ಕೊಟ್ಟಿರುತ್ತಾರೆ. ನಮಗೆ 6 ತಿಂಗಳಲ್ಲಿ ಪರ್ಮಿಷನ್ ಸಿಕ್ಕಿರುವುದಿಲ್ಲ. 6 ತಿಂಗಳ ನಂತರ ನಿಪಿ–2 ರಂತೆ ರಿನೀವಲ್ ಮಾಡಿರುತ್ತೇವೆ. ಕಾಲಾವಧಿಯನ್ನು ವಿಸ್ತರಿಸಿದ ಬಗ್ಗೆ ನಾನು ಕೊಟ್ಟ ದಾಖಲೆಗಳಲ್ಲಿ ಇರುವುದಿಲ್ಲ. ತದ ನಂತರ ವಕೀಲರ ಮೂಲಕ ದಿನಾಂಕಃ 16.12.2014 ರಿಂದ ಕಾಲಾವಧಿ ವಿಸ್ತರಣೆ ಮಾಡಲು ವಕೀಲರ ಮೂಲಕ ಪ್ರತಿವಾದಿಗೆ ಕೇಳಿರುವುದಿಲ್ಲ ನಾನೇ ಅವರಿಗೆ ಖುದ್ದಾಗಿ ಈ ಬಗ್ಗೆ ಮಾತುಕತೆ ಮಾಡಿದ್ದೇನೆ.  ಕಾಲಾವಧಿ ವಿಸ್ತರಣೆ ಮಾಡುವ ಬಗ್ಗೆ ನನ್ನ ವಾದ ಪತ್ರದಲ್ಲಾಗಲೀ, ಪ್ರಮಾಣ ಪತ್ರದಲ್ಲಾಗಲೀ, ನೋಟಿಸಿನಲ್ಲಾಗಲೀ ಹೇಳಿದ್ದೇನೆಂದು ನೆನಪಿರುವುದಿಲ್ಲ. ಅಡ್ವಾನ್ಸ್ ಅಮೌಂಟನ್ನು ವಾಪಸ್ಸು ಕೊಡಿ ಎಂದು ದಿನಾಂಕಃ 16.12.2014 ರ ನಂತರ ಲೆಟರ್ ಕರೆಸ್ಪಾಂಡೆನ್ಸ್ ಮಾಡಿರುವುದಿಲ್ಲ.

ಅಗ್ರಿಮೆಂಟಿನ ಅವಧಿ ಮುಗಿದು ಎರಡು ವರ್ಷ ಹನ್ನೊಂದು ತಿಂಗಳ ನಂತರ ಪ್ರತಿವಾದಿಗೆ ನೋಟಿಸ್ ಕೊಟ್ಟಿದ್ದೇವೆ ಎಂದರೆ ಸರಿಯಲ್ಲ  ಪರ್ಮಿಷನ್ ಬಂದ ತಕ್ಷಣ ನೋಟಿಸ್ ಕೊಟ್ಟಿದ್ದೇವೆಂದು ಉತ್ತರಿಸುತ್ತಾರೆ.  ನಿಪಿ–6ನ್ನು ನಾನು ಓದಿರುತ್ತೇನೆ. ನಿಪಿ–6 ರ 8ನೇ ಪ್ಯಾರಾದಲ್ಲಿರುವ ಒಕ್ಕಣೆಗಳು ನಿಪಿ–1 ರಲ್ಲಿ ಇದೆಯೇ ಎಂದು ದಾಖಲೆ ನೋಡಿ ಹೇಳಲಬೇಕಾಗುತ್ತದೆ. ನಿಪಿ–9 ರ ಬಗ್ಗೆ ನನಗೆ 2017 ರಲ್ಲಿ ನನ್ನ ಗಮನಕ್ಕೆ ಬಂದಿರುತ್ತದೆ. 1ನೇ ಪ್ರತಿವಾದಿಗೆ

ಕಿಡ್ನಿ ಸಮಸ್ಯೆ ಇರುತ್ತದೆ. 2ನೇ ಪ್ರತಿವಾದಿ 1ನೇ ಪ್ರತಿವಾದಿಯ ಮಗಳಿರುತ್ತಾರೆ. 6 ತಿಂಗಳ ಅವಧಿಯೊಳಗಡೆ ಕ್ರಯ ಪತ್ರ ಮಾಡಲು ತಯಾರಿದ್ದೇನೆಂದು ತೋರಿಸಿಕೊಂಡಿಲ್ಲ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯ ಒಂದು ಕಿಡ್ನಿಯನ್ನು ತೆಗೆದಿರುವುದರಿಂದ ಅವರು ಸಾವು ಬದುಕಿನ ನಡುವೆ ಹೋರಾಡುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿಯು ಸಾವು ಬದುಕಿನ ನಡುವೆ ಹೋರಾಡುತ್ತಿದ್ದರಿಂದ 2ನೇ ಪ್ರತಿವಾದಿಗೆ ದಾನ ಪತ್ರವನ್ನು ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ದಾನ ಪತ್ರ ಬರೆದುಕೊಡುವ ಸಮಯದಲ್ಲಿ 1ನೇ ಪ್ರತಿವಾದಿಯು ಆರೋಗ್ಯವಾಗಿದ್ದರೆಂದು ಉತ್ತರಿಸುತ್ತಾರೆ.

2014 ರಲ್ಲಿ 1ನೇ ಪ್ರತಿವಾದಿಯನ್ನು ನೋಡಿದ್ದೇನೆ ತದ ನಂತರ ಎರಡು ಬಾರಿ ಹಣ ತೆಗೆದುಕೊಳ್ಳಲು ಬಂದಿದ್ದಾಗ ಬೆಂಗಳೂರಿನಲ್ಲಿ ನೋಡಿದ್ದೇನೆ. ತದ ನಂತರ ಈ ಕೇಸು ದಾಖಲಾಗುವವರೆಗೆ 1ನೇ ಪ್ರತಿವಾದಿಯನ್ನು ಭೇಟಿಯಾಗಿರುವುದಿಲ್ಲ. ಪ್ರತಿವಾದಿ ಸಲ್ಲಿಸಿದ ತಕರಾರನ್ನು ಓದಿಸಿ ತಿಳಿದುಕೊಂಡಿದ್ದೇನೆ. ಈ ಕೇಸು ಹಾಕುವ ಪೂರ್ವದಿಂದ ಮತ್ತು ಕೇಸು ಹಾಕುವ ದಿನದಿಂದ ಇದುವರೆಗೂ ರೂ. 11, 30,500/- ಕೊಡಲು ತಯಾರಿದ್ದರು ಎಂದು ಹೇಳುವುದು ಸುಳ್ಳು. ಈ ಪ್ರಕರಣವನ್ನು ಲೋಕ್ ಅದಾಲತ್ತಿಗೆ ಕಳುಹಿಸಿದಾಗ ನಾನು ಹಾಜರಿದ್ದೆ. ನನ್ನ ಅಗ್ರಿಮೆಂಟ್ ಕಾಲಾವಧಿ ಮುಗಿದಿದ್ದರಿಂದ ಪರಿಹಾರ ಕೇಳಲು ಹಕ್ಕಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.

ಓ ಹೇ ಕೇ ಸಾ ಸ ಇ ಒ

(ಸುನೀತ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ. ಕೊಳ್ಳೇಗಾಲ.